ಉಪಾಧ್ಯಕ್ಷಣಿಯವರು.—ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ರಿಪ್ಲೈ ಮಾಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಸಿರು ಕಾರ್ಡಿನಿಂದ ಸೂರಕ್ಕಿ ತೊಂಭತ್ತರಷ್ಟು ಜನ ಅಕ್ಕಿ ತೆಗೆದುಕೊಂಡು ತಿನ್ನುತ್ತಿದ್ದಾರೆ.....

ಉಪಾಧ್ಯಕ್ಷಣಿಯವರು.—ಮಾನ್ಯ ಯಡಿಯೂರಪ್ಪನವರೇ ಇದು ಚೆನ್ನಾಗಿರುವುದಿಲ್ಲ. ಎಲ್ಲರೂ ನಿಂತುಕೊಂಡು ಮಾತನಾಡಿದರೆ ಏನಿದು? ನೀವು ಹಿರಿಯ ಸದಸ್ಯರು ನಿಮ್ಮ ಮೆಂಬರ್ಸ್‌ಗೆ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಾಕೌಟ್ ಮಾಡುತ್ತೇವೆಂದು ಹೇಳುವುದು ಬೇಡವೇ ? ಅವರು ಹೇಳಿ ಹೋದರಲ್ಲ.

ಉಪಾಧ್ಯಕ್ಷಣಿಯವರು.—ನೀವು ಮಾತನಾಡಬೇಕಾದರೆ ನಿಮ್ಮ ಪಕ್ಷದ ಎಲ್ಲರೂ ಎದ್ದುನಿಂತು ಕೊಂಡು ಮಾತನಾಡುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಾಗೇ ಹೋಗುವುದಕ್ಕೆ ಬರುವುದಿಲ್ಲ. ಹೇಳಿ ಹೋಗುತ್ತೇವೆ

ಉಪಾಧ್ಯಕ್ಷಣಿಯವರು.—ಹತ್ತು ಜನರೂ ಏತಕ್ಕೆ ನಿಂತುಕೊಳ್ಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದನ್ನು ನಾನು ಹೇಳುತ್ತೇನೆ.

ಉಪಾಧ್ಯಕ್ಷಣಿಯವರು.—ಅದನ್ನು ತಾವು ದಯವಿಟ್ಟು ಕಂಟ್ರೋಲ್ ಮಾಡಬೇಕು.

ಶ್ರೀ ಅಜೀಜ್ ಸೇಠ್.—ಸಭೆ ಆಗುತ್ತಾ ಬಂತು, ಲಂಚ್ ಬ್ರೇಕ್ ಬರುತ್ತಿದೆ. ಅದನ್ನು ತಿಳಿದುಕೊಂಡು ವಾಕೌಟ್ ಮಾಡಿದರೆ ಏನು ಮಾಡೋಣ ಹೇಳಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ. ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಹೆಚ್ಚು ಮಾತನಾಡುವುದಿಲ್ಲ. ಎರಡೇ ಸಂಗತಿ ಹೇಳುತ್ತೇನೆ. ಗ್ರಾಮೀಣ ಪ್ರದೇಶದ ಜನತೆಗೆ ನಗರ ಪ್ರದೇಶದ ಜನತೆಗೆ ಯಾವ ರೀತಿ ಸಕ್ಕರೆ ಕೊಡುತ್ತಾರೆ ಅದೇ ರೀತಿ ಕೊಡುವ ವ್ಯವಸ್ಥೆ ಮಾಡಬೇಕು. ಅದಕ್ಕೆ ಸರಕಾರದವರು ಒಪ್ಪುತ್ತಿಲ್ಲ. ಇದಕ್ಕೆ ಪ್ರತಿಭಟನೆ ಮಾಡುತ್ತಿದ್ದೇವೆ, ಎರಡನೆಯದು ಹಸಿರು ಕಾರ್ಡ್‌ನಲ್ಲಿ ಜನ ಅಕ್ಕಿ ತಿನ್ನುತ್ತಿಲ್ಲ ಎನ್ನುವ ಅಜ್ಞಾನದಲ್ಲಿ ನೀವು ಇದ್ದೀರಿ. ಇದಕ್ಕೆ ನಾನು ಅನುಕಂಪ ವ್ಯಕ್ತಪಡಿಸುತ್ತೇನೆ. ಹಸಿರು ಕಾರ್ಡಿನ ಮೂಲಕ ರೈತರಿಗೆ ಬಡವರಿಗೆ ಎರಡು ರೂಪಾಯಿಗೆ ಅಕ್ಕಿ ಕೊಡುವುದನ್ನು ಉಳಿಸಬೇಕು. ಅದನ್ನು ಮಾಡದೇ ಹೋದರೆ ಸರಕಾರಕ್ಕೆ ಪ್ರತಿಭಟನೆ ಮಾಡಿ ಬಡವರ ಪರ ನೀವು ಇಲ್ಲ ಎಂದು ಹೇಳಬೇಕಾಗುತ್ತದೆ. ನೀವು ಕೊಡುವುದರ ಜೊತೆಗೆ ಇನ್ನು ೭-೮ ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದ್ದರೆ ಬಡವರಿಗೆ ಅಕ್ಕಿ ಸಿಗುತ್ತಿತ್ತು. ಅದನ್ನು ಮಾಡದೇ ಇರುವುದನ್ನು ಪ್ರತಿಭಟಿಸಿ ವಾಕೌಟ್ ಮಾಡುತ್ತೇವೆ.

ಶ್ರೀ ಅಜೀಜ್ ಸೇಠ್.—ಉತ್ತರ ಕೇಳಿಕೊಂಡು ವಾಕೌಟ್ ಮಾಡಿ. ಲೆವಿ ಪದ್ಧತಿ ಮಾಡಿದರೆ ಏತಕ್ಕೆ ಮಾಡುತ್ತೀರಿ ಎನ್ನುತ್ತಾರೆ. ರೈತರ ಮೇಲೆ ಬೇಡ ಎಂದು ಹೇಳಿದರು, ಅದೇ ರೀತಿ ಮಿಲ್ ಪಾಯಿಂಟ್ ಮಾಡಿ ಆಯಿತು. ಲೆವಿ ಕೊಡುವುದಿಲ್ಲ ಬೇಡ ಎನ್ನುತ್ತಾರೆ. ನಾವು ಏತಕ್ಕೆ ಎರಡು ರೂಪಾಯಿಗೆ ಅಕ್ಕಿ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ೩೫ ೧/೩ ಭಾಗ ಲೆವಿ ಇದೆ. ಇದನ್ನು ೫೦ ಪರ್ಸೆಂಟ್ ಲೆವಿ ಮಾಡಿದರೆ ನಾವು ಕೊಡಬಹುದು. ಹಸು ಚೆನ್ನಾಗಿರಬೇಕು ಹುಲ್ಲೂ ತಿನ್ನಬಾರದು, ಹಾಲೂ ಜಾಸ್ತಿ ಕೊಡಬೇಕು ಎಂದರೆ ಇದು ಯಾವ ಧರ್ಮ, ಯಾವ ನ್ಯಾಯ? ವಾಕೌಟ್ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಸರಕಾರದ ನೀತಿಯನ್ನು ಪ್ರತಿಭಟಿಸಿ ವಾಕೌಟ್ ಮಾಡುತ್ತೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಶ್ರೀ ಬಿ. ಎಸ್. ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ಎಂ. ಪಿ. ವೆಂಕಟೇಶ್.—ನಾನೂ ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇನೆ.

(ಜನತಾ ಪಕ್ಷದ ಸದಸ್ಯರಾದ ವೆಂಕಟೇಶ್‌ರವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷಣಿಯವರು.—ಸಾರಿಗೆ ಸಚಿವರು ಉತ್ತರ ಪ್ರಾರಂಭ ಮಾಡಬಹುದು.

ಶ್ರೀ ರಾಮಲಿಂಗಾರೆಡ್ಡಿ.—ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್.

ಉಪಾಧ್ಯಕ್ಷಣಿಯವರು —ಇಲ್ಲ, ಅವರು ಆಗಲೇ ಪ್ರಾರಂಭ ಮಾಡಿಬಿಟ್ಟಿದ್ದಾರೆ.